# ಭಾರತೀಯ ಜೀವನ ಪದ್ಧತಿಯಲ್ಲಿ ಗೃಹಸ್ಥರಿಗೆ ಆಧ್ಯಾತ್ಮಿಕ ಸಾಧನೆಯ ಆವಶ್ಯಕತೆ

**ಸರಗೂರು ರಮೇಶ್**

ನಮ್ಮ ದೇಶದ ಹೃದಯನಾಡಿಯಾದ ಆಧ್ಯಾತ್ಮಿಕತೆ ಮನೆಮನೆಗಳಲ್ಲಿ ಆಚರಣೆಗೆ ಬರುವುದರಿಂದ ಮಾತ್ರ ಆಧುನಿಕ ಜಗತ್ತಿನ ಅವಾಂತರಗಳನ್ನು ತಡೆಗಟ್ಟಬಹುದು ಎಂದು ಇಲ್ಲಿ ಪ್ರತಿಪಾದಿಸುವ ಲೇಖಕರು ಮೈಸೂರು ಶ್ರೀರಾಮಕೃಷ್ಣ ವಿದ್ಯಾಶಾಲಯಲ್ಲಿ ಆಂಗ್ಲ ಉಪನ್ಯಾಸಕರು; ಅವರು ಉತ್ತಮ ಭಾಷಣಗಾರರು ಹಾಗೂ ಬರಹಗಾರರಾಗಿದ್ದಾರೆ.

ನಮ್ಮ ಜೀವನ ಪದ್ಧತಿಯಲ್ಲಿ ಗೃಹಸ್ಥರಿಗೆ ಆಧ್ಯಾತ್ಮಿಕ ಸಾಧನೆ ಆವಶ್ಯಕವೇ ಎಂಬ ಪ್ರಶ್ನೆ ಪ್ರಸ್ತುತ ಸಂದರ್ಭದಲ್ಲಿ ಎಲ್ಲ ಪ್ರಬುದ್ಧರನ್ನೂ ಕಾಡುವಂಥಾದ್ದೇ ಎಂಬುದು ನಿಜ. ಆಧ್ಯಾತ್ಮಿಕ ಸಾಧನೆ ಅತ್ಯಗತ್ಯ ಎಂಬ ಉತ್ತರವೂ ನಿಶ್ಚಿತವಾದುದು. ಆದರೆ ಎಲ್ಲ ಗೃಹಸ್ಥರೂ ಈ ಮಾರ್ಗವನ್ನು ಆರಿಸಿಕೊಳ್ಳುವರೇ ಎಂಬ ಪ್ರಶ್ನೆಗೆ ಮಾತ್ರ ಪೂರ್ಣ ಆತ್ಮವಿಶ್ವಾಸದಿಂದ 'ಹೌದು' ಎಂದು ಉತ್ತರಿಸಲಾಗುವುದಿಲ್ಲ. ಅದು ಅವರವರ ಆಯ್ಕೆಗೂ ಅಭಿರುಚಿಗೂ ಬಿಟ್ಟ ವಿಚಾರ. ಆಧ್ಯಾತ್ಮಿಕ ಸಾಧನೆ ಮಾಡುವ ಒಂದಾನೊಂದು ಹಾದಿಯೆಂದು ತಿಳಿದೇ ಗೃಹಸ್ಥ ಜೀವನವನ್ನು ಸಾಮಾನ್ಯವಾಗಿ ಯಾರೂ ಪ್ರವೇಶಿಸಿರುವುದಿಲ್ಲ. ಆರಂಭದಲ್ಲಿ ಮಾನವ ಮನಸ್ಸಿನ ಲಹರಿಗಳೂ ಮತ್ತು ಕನಸುಗಳು ಬೇರೆಯೇ ಇರುತ್ತವೆ. ಭದ್ರತೆ ಮತ್ತು ಸುಖದ ಹಂಬಲದಿಂದ ನಾವು ಗೃಹಸ್ಥರಾಗುತ್ತೇವೆ. ಗಂಡಸಿನಿಂದ ಹೆಂಡತಿಯೂ, ಹೆಂಡತಿಯಿಂದ ಗಂಡನೂ ಸುಖ ಪಡೆಯಬೇಕು ಎಂಬ ನಿರೀಕ್ಷೆಯಿಂದಲೇ ಜೀವನ ಆರಂಭವಾಗುತ್ತದೆ. ಸರಿಯಾಗಿ ತಿಳಿದು ನೋಡಿದರೆ ಇದು ಪರಾವಲಂಬನ ಸ್ಥಿತಿ. ಆಗಿನ ನಮ್ಮ ಆಸೆಗಳು ಮತ್ತು ನಿರೀಕ್ಷೆಗಳು ಏಕಮುಖವಾಗಿರುವ ಸಾಧ್ಯತೆಗಳೇ ಹೆಚ್ಚು. ಬದುಕಿನ ಸಮಗ್ರ ಚಿತ್ರಣವಾಗಲೀ, ಒದಗಿ ಬರುವ ಅನೂಹ್ಯ ಘಟನೆಗಳ ಬಗೆಗಾಗಲೀ ನಾವು ಸಾಕಷ್ಟು ಎಚ್ಚರ ವಹಿಸಿರುವುದಿಲ್ಲ. ಬದುಕಿನ ಸಂಕೀರ್ಣತೆಯನ್ನು ಮರೆತೋ, ಮರೆಮಾಚಿಯೋ ನಮ್ಮದೇ ಆದ ಕಲ್ಪನಾ ಲೋಕದಲ್ಲಿ ಸ್ವಲ್ಪಕಾಲ ತೇಲಿಹೋಗುತ್ತೇವೆ. ಆದರೆ 'ಜೀವನ' ಎಂಬುದು ಒಬ್ಬ ನಿಷ್ಠುರವಾದ ಶಿಕ್ಷಕನಂತೆ. ಅದು ತಾನು ನೀಡುವ ಪಾಠಗಳ ಪುಟಗಳನ್ನು ಒಂದೊಂದಾಗಿ ತೆರೆಯುತ್ತಾ ಹೋಗುತ್ತದೆ. ಅನಿರೀಕ್ಷಿತ ಹೊಡೆತಗಳು ಮತ್ತು ಆಕಸ್ಮಿಕ ತಿರುವುಗಳಿಂದ ನಾವು ಕಟ್ಟಿಕೊಂಡಿದ್ದ ಕಲ್ಪನಾಸಾಮ್ರಾಜ್ಯ ನುಚ್ಚುನೂರಾಗುತ್ತದೆ. ಭ್ರಮನಿರಸನವಾಗಿ ವಾಸ್ತವದ ನೆಲೆಗಟ್ಟಿನ ಮೇಲೆ ಕಾಲೂರಿ ನಡೆಯಬೇಕಾಗುತ್ತದೆ. ಆಗ ಹತಾಶರಾಗಿ, ನಿರಾಶರಾಗಿ, ಅಸಹಾಯಕರಾಗಿ ಕುಗ್ಗಿಹೋಗುವವರೇ ಬಹಳ ಮಂದಿ ಎಂಬುದು ಸ್ಪಷ್ಟ. ಸಂಬಂಧಗಳನ್ನು ಮುರಿದು ಹೊರಗೆ ಹೋಗಬಹುದು ಅಥವಾ ಅಪ್ಪಳಿಸುತ್ತಿರುವ ಅಲೆಗಳಿಗೆ ಅಂಜದೇ ಮುಂದಕ್ಕೆ ದಿಟ್ಟ ಹೆಜ್ಜೆ ಇಡಬಹುದು ಎಂಬ ಎರಡು ಪ್ರಧಾನ ಆಯ್ಕೆಗಳು ಬಾಳಿನ ಕವಲುದಾರಿಯಲ್ಲಿ ನಮ್ಮ ಮುಂದೆ ಇರುತ್ತವೆ. ಇಲ್ಲಿಯೇ ಬೆಳಕಿನೆಡೆಗೆ ನಮ್ಮನ್ನು ನಡೆಸುವ ಆಧ್ಯಾತ್ಮಿಕ ಸಾಧನೆಯ ಅಗತ್ಯವು ಎದ್ದು ಕಾಣುವುದು ಮತ್ತು ಅನಿವಾರ್ಯವಾಗುವುದು. 'ಈಸಬೇಕು ಇದ್ದು ಜಯಿಸಬೇಕು' ಎಂಬ ಪುರಂದರದಾಸರ ಮಾತು ಚಾಟಿಯಂತೆ ನಮ್ಮನ್ನು ಹೊಡೆದು ಎಚ್ಚರಿಸುವುದು.

ಈಗ ಮಾನವನ ವ್ಯಕ್ತಿತ್ವದ ಕಡೆಗೆ ಒಮ್ಮೆ ಕಣ್ಣು ಹಾಯಿಸೋಣ. ಈ 'ನಾನು' ಎಂದರೆ ನಾವು ಏನು ತಿಳಿದಿದ್ದೇವೆ? ಒಂದು ನಿಶ್ಚಿತ ದೇಹವಿರುವ, ಎಲ್ಲ ಅನುಭವಗಳನ್ನೂ ತನಗೆ ಅನ್ವಯಿಸಿಕೊಳ್ಳುತ್ತಿರುವ, ಮಾನ್ಯತೆಯನ್ನು ಬಯಸುವ ಮತ್ತು ಅವಮಾನವನ್ನು ಸಹಿಸದ ಅಹಂ-ಕೇಂದ್ರಿತ ವ್ಯಕ್ತಿತ್ವವೇ ನಾನಾಗಿರುವೆ. ಇದು ಸ್ವಾರ್ಥವು ಸಹಜವಾಗಿ ಬೇರುಬಿಟ್ಟಿರುವ ಮಾನಸಿಕ ಕೇಂದ್ರ. ತನಗೆ ಏನು ಲಾಭವಾಗುತ್ತದೆ ಎಂದು ಸತತವಾಗಿ ಕಾತರದಿಂದ ಕಾಯುತ್ತಿರುವ ಆಕಾಂಕ್ಷೆ. ಲೋಕ ವ್ಯವಹಾರದಲ್ಲಿ ಹೇಗೋ ಮಾನವ ಸಂಬಂಧಗಳಲ್ಲೂ ಹಾಗೆಯೇ ಸ್ವಂತದ ಸುಖ, ಲಾಭ, ಗಳಿಕೆಯನ್ನೇ ಪ್ರಮುಖವಾಗಿ ಪರಿಗಣಿಸುವ ಸ್ಥಿತಿ. ಈ ಸ್ಥಿತಿಯಲ್ಲಿ ನಮ್ಮ ವ್ಯಕ್ತಿತ್ವವು ತುಂಬಾ ಸಂಕುಚಿತವಾಗಿರುತ್ತದೆ. ಅದರ ಭಾವನೆಗಳೋ ಹಿಗ್ಗಿ ಹಿರಿದಾಗಿಲ್ಲ. ಉಳಿದವರನ್ನೂ ತನ್ನ ಪರಿಧಿಯೊಳಗೆ ಸೆಳೆದುಕೊಳ್ಳುವಷ್ಟು ಉದಾತ್ತವಾಗಿಲ್ಲ. ಅದರ ಮಾನಸಿಕ ಲೆಕ್ಕಾಚಾರಗಳು ಸ್ವಾರ್ಥದ ಸಂಕಲನ ಮತ್ತು ಗುಣಾಕಾರಗಳಾಗಿಯೇ ಇವೆ. ಎಷ್ಟು ಪಡೆದರೂ ಮತ್ತಷ್ಟು ಪಡೆಯಬೇಕೆಂಬ ಅತೃಪ್ತ ಅವಸ್ಥೆ. ಇದು ಶರೀರದಲ್ಲಿ, ಪ್ರಾಣದಲ್ಲಿ, ಮನಸ್ಸಿನಲ್ಲಿ, ಹೃದಯದಲ್ಲಿ ಆಳವಾಗಿ ಬೇರೂರಿ ಉಳಿದವೆಲ್ಲಾ ತನ್ನ ಸುಖಕ್ಕಾಗಿಯೇ ಇದೆ ಎಂಬ ಪರಿಕಲ್ಪನೆಯಲ್ಲಿ ಜೀವಿಸುತ್ತಿರುತ್ತದೆ. ಇಂತಹ ಸ್ವಕೇಂದ್ರಿತ ಪರಿಕಲ್ಪನೆಗಳ ಪ್ರಭಾವವೇ ದಟ್ಟವಾಗಿರುವಾಗ ವ್ಯಕ್ತಿ ಗೃಹಸ್ಥ ಜೀವನವನ್ನು ಪ್ರವೇಶಿಸುವನು. ಈಗ ಮಾಡಿಕೊಂಡ ಹೊಸ ಸಂಬಂಧಗಳು ಮತ್ತು ಏರ್ಪಡಿಸಿಕೊಂಡ ನವ ಸಂದರ್ಭಗಳು ಹೊಸ ಸವಾಲುಗಳನ್ನೂ, ಸಮಸ್ಯೆಗಳನ್ನೂ ತಂದೊಡ್ಡುತ್ತವೆ. ಈ ಮೊದಲು ಬದುಕಿದಂತೆ ಈಗ ಬದುಕಲು ಸಾಧ್ಯವಿಲ್ಲ ಎಂಬ ಸತ್ಯವನ್ನು ಮನಗಾಣಿಸುತ್ತವೆ.

ಪರಿವರ್ತನೆ ಅನಿವಾರ್ಯ ಎಂಬ ಸಂದೇಶವನ್ನು ಸ್ಪಷ್ಟವಾಗಿ ಗೃಹಸ್ಥ ಜೀವನದಲ್ಲಿ ಪಡೆಯುತ್ತೇವೆ.

ಇದೀಗ ಆಧ್ಯಾತ್ಮಿಕ ಸಾಧನೆಯ ಅಗತ್ಯ ಎದ್ದು ಕಾಣುವುದು. ಕುಟುಂಬ ಜೀವನದಲ್ಲಿ ಉಂಟಾಗುವ ಏರಿಳಿತಗಳು, ಆಕಸ್ಮಿಕ ಸಾವುನೋವುಗಳು, ತಡೆಯಲಾರದ ನಷ್ಟ ಹೊಡೆತಗಳು, ಸಂಬಂಧ ಗಳಲ್ಲಿ ಸ್ವಾರ್ಥ ಉದ್ದೇಶಗಳಿಂದ ಭುಗಿಲೇಳುವ ಸಂಘರ್ಷಗಳು, ಹಣ-ಆಸ್ತಿ ವಿಚಾರಕ್ಕಾಗಿ ಒಳಗೊಳಗೆ ನಡೆಯುವ ಹುನ್ನಾರ ಹವಣಿಕೆಗಳು, ಸ್ವಪ್ರತಿಷ್ಠೆಯ ಸ್ಥಾನಮಾನಗಳಿಗಾಗಿ ಮಾಡುವ ದ್ವೇಷಪೂರಿತ ಸ್ಪರ್ಧೆಗಳು, ಒಳಿತು-ಕೆಡುಕುಗಳೆಂಬ ಗುಣಗಳು, ಘರ್ಷಣೆಗಳು, ನಮ್ಮೊಳಗೇ ತಿಳಿಯದಂತೆ ಸುಪ್ತವಾಗಿದ್ದು ಸನ್ನಿ ವೇಶಗಳ ಒತ್ತಡದಿಂದ ಹೊರಹೊಮ್ಮುವ ದುರ್ಭಾವನೆಗಳು, ರಾಗ-ದ್ವೇಷಗಳ ಜಟಿಲ ಜೀವನಕ್ಷೇತ್ರ, ಶರೀರವನ್ನು ಅಸ್ವಸ್ಥಗೊಳಿಸಿ ಬಳಲಿಸುವ ರೋಗರುಜಿನಾದಿಗಳು, ಹಾದಿತಪ್ಪಿ ದುರ್ಮಾರ್ಗಕ್ಕೆ ಬೀಳುವ ಮಕ್ಕಳು, ತಿರುಗಿ ಬಿದ್ದು ನಾನಾ ರೀತಿಯ ಪ್ರತೀಕಾರದ ಕೃತ್ಯಗಳಲ್ಲಿ ಮುಳುಗುವ ನೆಂಟರಿಷ್ಟರು, ಕಠೋರವಾದ ಲೋಕ ವ್ಯವಹಾರದ ಒತ್ತಡ ಮತ್ತು ಬದಲಾವಣೆಗಳು... ಹೀಗೆ ಗೃಹಸ್ಥ ಜೀವನವೊಂದು ರಣರಂಗವಾಗಿ, ನಮ್ಮನ್ನು ಕಬಳಿಸುವ ಕುರು ಕ್ಷೇತ್ರದಂತೆ ಭಾಸವಾಗುವ ಸಂಭವವಿದೆ. ಆಗ 'ಧರ್ಮಕ್ಷೇತ್ರ'ದ ನೀರು ನೆರಳಿಗಾಗಿ ಗೃಹಸ್ಥನು ಹಸಿದು ಹಂಬಲಿಸುವುದು ಸ್ವಾಭಾ ವಿಕವೇ ಆಗಿದೆ. ಈ ಕಣಿವೆ, ಕಂದರಗಳ ಕತ್ತಲಿನಲ್ಲಿ ಎಡವಿ ಕೊಂಡು, ತಡವಿಕೊಂಡು ಮುಗ್ಗರಿಸುತ್ತಾ ಮುನ್ನಡೆವ ಗೃಹಸ್ಥ ಜೀವಿಯು ಬಾನಿನಲ್ಲಿ ಬೆಳಗುತ್ತಿರುವ ಭಾಸ್ಕರನ ಕಿರಣಗಳಿಗಾಗಿ, ಸತ್ಯಸಾಕ್ಷಾತ್ಕಾರಕ್ಕಾಗಿ, ಅಂತರಂಗದ ಸಮಾಧಾನ ಶಾಂತಿಗಳಿಗಾಗಿ, ನಿಷ್ಕಲ್ಮಷವಾದ ಪ್ರೇಮದ ಪ್ರಕಾಶಕ್ಕಾಗಿ, ಜೀವನ ಕರ್ಮಗಳ ನಿರ್ವಹಣೆಯ ನೈಜ ನಿಯಮಗಳಿಗಾಗಿ ಅಭೀಪ್ಸೆಯುಳ್ಳವನಾಗು ತ್ತಾನೆ; ವ್ಯಾಕುಲತೆ ಬೆಳೆಸಿಕೊಳ್ಳುತ್ತಾನೆ. ಆಗಲೇ ವೈದಿಕ ಮಂತ್ರ ವಾದ,

**ಓಂ ಅಸತೋ ಮಾ ಸದ್ಗಮಯ**
**ತಮಸೋ ಮಾ ಜ್ಯೋತಿರ್ಗಮಯ**
**ಮೃತ್ಯೋರ್ಮಾ ಅಮೃತಂಗಮಯ**

— ಎಂಬುದು ನೊಂದ ಜೀವಿಯ ಹೃದಯದಲ್ಲಿ ಅನು ರಣನಗೊಳ್ಳುವುದು.

ಆಗಲೇ ನಮಗೆ ''ಅಹಂಕಾರದ ಸ್ವರೂಪಿನಲ್ಲಿ ಮಾಯೆಯು ನಮ್ಮ ಹೃದಯವನ್ನು ಆವರಿಸಿದೆ'' ಎಂಬ ಶ್ರೀರಾಮಕೃಷ್ಣ ಪರಮಹಂಸರ ಮಾತಿನ ಸತ್ಯ ಅರ್ಥವಾಗಲಾರಂಭಿಸುತ್ತದೆ. ಸಮಸ್ತಜೀವನದ ಆಗುಹೋಗುಗಳನ್ನೂ ತಿಳಿದು ನಿರ್ದೇಶಿಸು ತ್ತಿರುವ ಕರ್ಮಾಧ್ಯಕ್ಷನಾದ ಪರಮಾತ್ಮನಿಗೆ ಮೊರೆ ಹೋಗಬೇಕೆಂಬ ಪ್ರಾಮಾಣಿಕ ಅನಿಸಿಕೆ ಹೃದಯದಲ್ಲಿ ಪ್ರಕಟಗೊಳ್ಳಲಾರಂಭಿಸು ತ್ತದೆ. ಮಾರ್ಗದರ್ಶನ ಮಾಡಿ ಕೈಹಿಡಿದೆತ್ತುವ ಗುರುವಿಗಾಗಿ ಅಥವಾ ಗುರುಶಕ್ತಿಗಾಗಿ ಜೀವವು ಮೊರೆಹೋಗುವ ಕಾಲ ಬಂದಿ ರುತ್ತದೆ.

ಈ ಭಾವವನ್ನು ರಾಷ್ಟ್ರಕವಿ ಕುವೆಂಪುರವರು 'ಶರಣು' ಎಂಬ ಕವನದಲ್ಲಿ ಹೀಗೆ ಅಭಿವ್ಯಕ್ತಿಸಿದ್ದಾರೆ:

**ಇದುವರೆಗೆ ನೀನೆನ್ನ ಕೈಹಿಡಿದು ನಡೆಸಿರುವೆ,**
**ಇನ್ನಾದರೂ ನನ್ನ ಕೈ ಬಿಡದಿರು.**
**ಅಂದಿನಂತೆಯೆ ಇಂದು ನಾನೊಂದು ಶಿಶು ಎಂದು**
**ಎಂದಿಗೂ ಕೈಬಿಡದೆ ಸಲಹೈ, ಗುರೂ!**

ಇದೇಕೆ ಹೀಗೆ ಎಂದರೆ, ಗೃಹಸ್ಥಜೀವನವನ್ನು ಪ್ರವೇಶಿಸಿದ ಮೇಲೆ ನಿರಂತರವಾಗಿ ನಮ್ಮನ್ನು ನಾವು ವಿಸ್ತರಿಸಿಕೊಳ್ಳುತ್ತಾ ಹೋಗ ಬೇಕಾಗುತ್ತದೆ. ಸಂಕುಚಿತವಾಗಿದ್ದ ನಮ್ಮ ಅಹಂ-ಕೇಂದ್ರಿತ ವ್ಯಕ್ತಿತ್ವವು ಅವಿಕಸಿತ ಸ್ಥಿತಿಯಲ್ಲಿತ್ತು . ಈಗ ಅದು ತನ್ನ ಪರಿಯನ್ನು ಹಿಗ್ಗಿಸಿ ಹಿಗ್ಗಿಸಿ ವಿಶಾಲಗೊಳ್ಳಬೇಕು. ಅಲ್ಪದೃಷ್ಟಿಯು ಭೂಮ ದೃಷ್ಟಿಯಾಗಬೇಕು. ಕಿರಿದಾದ ಕಾಲುವೆಗಳಂತೆ ಇರುವ ನಮ್ಮ ಭಾವನೆಗಳು ಉದಾತ್ತಗೊಂಡು ತಮ್ಮ ಹರಹನ್ನು ಹೆಚ್ಚಿಸಿ ದೊಡ್ಡ ನದಿಗಳಾಗಬೇಕು. ಸ್ವಾರ್ಥದ ಗೋಡೆಗಳು ಸವೆದು ನಿಃಸ್ವಾರ್ಥದ ನಿಷ್ಕಲ್ಮಷ ಪ್ರೇಮ ಮತ್ತು ಪರರ ಹಿತಗಳೂ ನನಗೆ ಸೇರಿದ್ದು ಎಂಬ ಅರಿವು ಜಾಗೃತವಾಗಬೇಕು. ನಮ್ಮ ಚಿಂತನಾ ಪ್ರಕ್ರಿಯೆಯೇ ಪೂರ್ಣ ಪಲ್ಲಟಗೊಂಡು ಅಹಂ-ಕೇಂದ್ರಿತ ವ್ಯಕ್ತಿತ್ವವು ಆತ್ಮ ಕೇಂದ್ರಿತ ಅಥವಾ ದೈವಕೇಂದ್ರಿತವಾಗಿ ಅರಕ್ತನೀರವ ಕ್ರಾಂತಿ ಯಾಗಬೇಕು. ಈ ಇಚ್ಛಿತ ಹಿತಕಾರಿಯಾದ ಪರಿಣಾಮಗಳನ್ನು ಸಾಧಿಸಲು ಗೃಹಸ್ಥರಿಗೆ ಆಧ್ಯಾತ್ಮಿಕ ಸಾಧನೆ ತುಂಬಾ ಅಗತ್ಯ. ಸಾಧನೆಯು ಸರಿಯಾದ ಮಾರ್ಗದಲ್ಲಿ ಮುಂದುವರಿಯಲು ಆಧ್ಯಾತ್ಮಿಕ ಜ್ಞಾನದ ಅನುಸಂಧಾನವು ಅಪರಿಹಾರ್ಯ.

ಮಾನವರಾದ ನಾವು ಹಿಗ್ಗಲು ಹೆದರುವ 'ಕೂಪಮಂಡೂಕ' ಗಳಾಗಬಾರದು. ಇಲ್ಲಿ 'ಹಿಗ್ಗು' ಎಂಬ ಪದಕ್ಕೆ 'ಆನಂದ' ಮತ್ತು 'ವಿಸ್ತರಿಸು' ಎಂಬ ಎರಡು ಅರ್ಥಗಳಿವೆ. ವಾಸ್ತವವಾಗಿ ನಮ್ಮನ್ನು ನಾವು ಅಸೀಮವಾಗಿ ವಿಸ್ತರಿಸಿಕೊಂಡಾಗಲೇ ಅನಂತ ಆನಂದ ದಿಂದ ಇರಬಲ್ಲೆವು. ಮಾನವಾತ್ಮರಿಗೆ ಅಧ್ಯಾತ್ಮವು ನೀಡುವ ಸಂದೇಶವಾದರೂ ಇದೇ ಆಗಿದೆ. ಅಧ್ಯಾತ್ಮವೆಂದರೆ ಅವಿದ್ಯೆ, ಅಜ್ಞಾನದ ಆವರಣವನ್ನು ಕಳಚಿ ವಿಶಾಲಗೊಂಡು ವಿಕಾಸ ಗೊಳ್ಳುವುದು. ಮನುಷ್ಯರಲ್ಲಿ ಈ ಸಾಧ್ಯತೆಯು ಪ್ರಚ್ಛನ್ನವಾಗಿದ್ದು ಕೊಂಡಿದೆ ಎಂದು ಸ್ವಾಮಿ ವಿವೇಕಾನಂದರು ತಿಳಿಸುತ್ತಾರೆ. ಗೃಹಸ್ಥರು ಮಾತ್ರ ತಾವು ಕಟ್ಟಿಕೊಂಡ ಬೇಲಿಯೊಳಗೆ ಉಸಿರುಗಟ್ಟಿ ಹಾಗೆಯೇ ಜೀವನಪೂರ್ತಿ ಇರಬೇಕು ಎಂದು ಯಾರು ತಾನೇ ಸಲಹೆ ಮಾಡುತ್ತಾರೆ? ಕುಟುಂಬದ ಒಳಗಿದ್ದರೂ, ಮಾನವನ ಒಳಗೆ ಅಮೃತವೂ ಅವಿನಾಶಿಯೂ, ಅವನ ಸ್ವಸ್ವರೂಪವೂ ಆದ ಪವಿತ್ರ ಆತ್ಮವಿದೆ ಎಂದು ತಿಳಿಸಿಕೊಡುತ್ತದೆ ಅಧ್ಯಾತ್ಮ. ದೇಹಭಾವ ದಿಂದ ಗೃಹಸ್ಥ ಜೀವನವನ್ನು ಪ್ರವೇಶಿಸಿದ ನಾವು ಸೂಕ್ಷ್ಮಸಂವೇ

ದನಾಶೀಲತೆಯುಳ್ಳ ಪ್ರಬುದ್ಧ ಮಾನವನಾಗಿ ಬೆಳೆದು, ನಂತರ ದಿವ್ಯಮಾನವನಾಗಿ ಅಥವಾ ಆತ್ಮಪುರುಷನಾಗಿ ಪರಿಣಮಿಸುವುದು ಸಾಧ್ಯ. ಆ ರೀತಿ ಬೆಳೆದು ಅರಳುವುದು ಗೃಹಸ್ಥ ಜೀವನದಲ್ಲಿಯೂ ಕೂಡ ಸುಪ್ತವಾಗಿರುವ ಅರ್ಥವಾಗಿದೆ. ಮಾತ್ರವಲ್ಲ; ದಿವ್ಯತೆಯುಪೂರ್ಣವಿಕಸಿತಗೊಂಡುದೇವಮಾನವನಾಗುವುದು ಗೃಹಸ್ಥ ಜೀವನದಲ್ಲಿ ಪಡೆಯುವ ಒಟ್ಟು ಅನುಭವಗಳ ಗುರಿ. ಗಂತವ್ಯ ಮತ್ತು ಪರಮಪ್ರಯೋಜನ ಎಂಬುದು ದಿವ್ಯತ್ರಯರ ಮತ್ತು ಉಳಿದ ಮಹಾಪುರುಷರ ಉದ್ಘೋಷವಾಗಿದೆ. ಅಂದರೆ ತನ್ನನ್ನು ತಾನು ಪೂರ್ಣವಾಗಿ ಅರಿಯಲು, ಪರಮಾತ್ಮನಲ್ಲಿ ಭಕ್ತಿ ವರ್ಧಿಸಲು, ಜೀವನವು ನಿರರ್ಥಕವಾಗದೆ ಸಾರ್ಥಕವಾಗಲು, ಮಾಡಿದ ಕರ್ಮಗಳ ಅಂತರಾರ್ಥ ತಿಳಿಯಲು ಗೃಹಸ್ಥ ಜೀವನದಲ್ಲಿ ದಿಕ್ಕುಗಾಣದೆ ಕಂಗಾಲಾಗಿರುವ ಜೀವರುಗಳಿಗೆ ಆಧ್ಯಾತ್ಮಿಕ ಸಾಧನೆಯೇ ನಿಜವಾದ ಔಷಧ, ಆಧಾರವಾಗಿರುವ ಊರುಗೋಲು ಮತ್ತು ಉದ್ಧರಿಸುವ ದಾರಿದೀಪ.

''ಸಂಸಾರದಲ್ಲಿ ಇದ್ದರೆ ತಾನೆ ಏನಂತೆ? ಈಶ್ವರ ಚಿಂತನೆ ಸತತವಾಗಿ ಇದ್ದರೆ ಏನೂ ಭಯವಿಲ್ಲ'' ಎಂದು ಶ್ರೀರಾಮಕೃಷ್ಣರು ಹೇಳುತ್ತಾರೆ. ನೀವು ಭಕ್ತಿಯನ್ನು ಆಶ್ರಯಿಸಿಕೊಂಡು ಬಾಳುವುದಿಲ್ಲ ಎಂದರೆ ಮತ್ತೇನನ್ನು ತಾನೆ ಆಶ್ರಯಿಸಿಕೊಂಡು ಜೀವಿಸುತ್ತೀರಿ? ಎಂದು ಅವರು ನಮ್ಮನ್ನು ಪ್ರಶ್ನಿಸಿ ಎಚ್ಚರಿಸುತ್ತಾರೆ. ಚಿತ್ತ ಮತ್ತು ಹೃದಯವನ್ನು ಶುದ್ಧಿಮಾಡುವ ಪ್ರಯತ್ನಗಳನ್ನು ಬಿಟ್ಟುಬಿಟ್ಟರೆ ಜೀವನ ಕಸದ ತೊಟ್ಟಿಯಾಗುತ್ತದೆ. ದೀರ್ಘಕಾಲ ಕೃಷಿ ಮಾಡದೆ ನಿರ್ಲಕ್ಷಿಸಿದ ಭೂಮಿಯಲ್ಲಿ ಕಳೆಯು ವಿಪುಲವಾಗಿ ಬೆಳೆಯುವಂತೆ, ಬರೀ ಪ್ರಾಪಂಚಿಕ ವ್ಯವಹಾರಗಳಲ್ಲಿಯೇ ಮುಳುಗಿ ಮಗ್ನರಾದ ಮಾನವರ ಅಂತರಂಗದಲ್ಲಿ ಅರಿಷಡ್ವರ್ಗಗಳ ಪಾಚಿಯೇ ತುಂಬಿ ಆವರಿಸಿಕೊಳ್ಳುತ್ತದೆ. ಆದ್ದರಿಂದಲೇ ಆತ್ಮದ ತೇಜಸ್ಸನ್ನು ವೃದ್ಧಿಸುವ, ಹೃದಯಸ್ಥನಾಗಿರುವ ಸನ್ನಿಧಿಯ ಭಾವನೆಯನ್ನು ಹೆಚ್ಚಿಸುವ ನಿತ್ಯಸಾಧನೆಗಳಲ್ಲಿ ತೊಡಗಿ ಆಶೆ ಕಾಮನೆಗಳೆಂಬ ರೆಂಬೆ ಕೊಂಬೆಗಳಿಂದ ಹರಡಿ ಛಿದ್ರವಾಗಿರುವ ಮನೋ-ಬುದ್ಧಿಗಳನ್ನು ಏಕಾಗ್ರಗೊಳಿಸಿಕೊಂಡು 'ವ್ಯವಸಾಯಾತ್ಮಿಕಾ ಬುದ್ಧಿ'ಯಾಗಿ ಮಾಡಿಕೊಳ್ಳಬೇಕು ಎನ್ನುತ್ತದೆ ಶ್ರೀಮದ್ ಭಗವದ್ಗೀತೆ!

ಸಾಧನೆಯಲ್ಲಿ ತೊಡಗದೆ ನಿಶ್ಚಯಾತ್ಮಿಕಾ ಬುದ್ಧಿಯನ್ನು ಸಾಧಿಸಿಕೊಳ್ಳುವುದು ಸಾಧ್ಯವಿಲ್ಲ ಎಂದು ಜೀವ-ಜಗತ್-ಈಶ್ವರ ಜ್ಞಾನವನ್ನು ಗೀತೆ ೧೮ ಅಧ್ಯಾಯಗಳಲ್ಲಿ ಸಮಗ್ರವಾಗಿ ವಿವೇಚಿಸಿ, ಅನಾವರಣಗೊಳಿಸಿ ನಮ್ಮ ಮುಂದಿಟ್ಟಿದೆ. ಗೀತೆ, ಉಪನಿಷತ್ತುಗಳಂತಹ ಗಾಢವಾದ ಮನಶ್ಶಾಸ್ತ್ರೀಯ ಹಿನ್ನೆಲೆಯಿರುವ, ಇಡೀ ಮನುಕುಲದ ಶ್ರೇಯಸ್ಸನ್ನು ಬಯಸುವ ಸದ್ಗ್ರಂಥಗಳಿಗೆ ವಿಮುಖರಾಗಿ ಗೃಹಸ್ಥರು ತಮಗಿರುವ ಸೀಮಿತ ತಿಳುವಳಿಕೆಯಿಂದಲೇ ಉತ್ತಮ ಜೀವನವನ್ನು ನಿರ್ವಹಿಸಬಲ್ಲರೆ? ಕಷ್ಟಕಾರ್ಪಣ್ಯಗಳಲ್ಲಿ ತೊಳಲುತ್ತಿರುವ ಮಾನವ ಜೀವಿಗಳ ಕಲ್ಯಾಣವನ್ನೂ, ಉದ್ಧಾರವನ್ನೂ ಮಹಾತ್ಮರ ನುಡಿಗಳು, ಸದ್ಗ್ರಂಥಗಳು, ಶಾಸ್ತ್ರಗಳು ಬಯಸುತ್ತವೆ. ಜೀವಪೋಷಕವಾದ ಈ ಅಮೃತನುಡಿಗಳಿಗೆ ಗೃಹಸ್ಥರು ತಮ್ಮ ಹೃನ್ಮನಗಳ ದ್ವಾರಗಳನ್ನು ಪೂರ್ವಗ್ರಹಗಳಿಂದ ಮುಕ್ತರಾಗಿ ತೆರೆದು, ಹೊಸ ಬೆಳಕನ್ನೂ, ಹೊಸ ಗಾಳಿಯನ್ನೂ ಬರಮಾಡಿಕೊಳ್ಳಬೇಕು. ಅದಕ್ಕಾಗಿ ಸ್ವಾಧ್ಯಾಯ ಮತ್ತು ಅನುಸಂಧಾನಗಳಲ್ಲಿ, ಆತ್ಮಶೋಧದಲ್ಲಿ ಸತತವಾಗಿ ನಿರತರಾಗಬೇಕು. 'ಸಮಯವಿಲ್ಲ, ಅತಿಯಾದ ಕೆಲಸವಿದೆ, ಅನೇಕ ಸಂಗತಿಗಳಲ್ಲಿ, ವ್ಯವಹಾರಗಳಲ್ಲಿ ಸಿಲುಕಿದ್ದೇನೆ' ಇತ್ಯಾದಿ ಕುಂಟುನೆಪ, ಸಬೂಬುಗಳನ್ನು ಹೇಳುತ್ತಾ ಮುಂದುವರಿದರೆ ಆತ್ಮವಂಚನೆಯಲ್ಲಿ ಮುಳುಗಿ ನಮ್ಮ ಹಿತವನ್ನೂ ಸಾಧಿಸಲಾರೆವು; ಇತರರಿಗೂ ಒಳಿತನ್ನು ಮಾಡಲಾರೆವು. ಅಂತಹವರನ್ನು ಕುರಿತೇ ಈಶಾವಾಸ್ಯೋಪನಿಷತ್ತು 'ಆತ್ಮಹನೋ ಜನಾಃ' ಎಂಬ ಮಾತನ್ನು ಹೇಳುತ್ತದೆ. 'ಆತ್ಮಶ್ರೀ ಇಲ್ಲದ ವಿದ್ಯೆ ಶ್ರೀರಾಮನಿಲ್ಲದ ಅಯೋಧ್ಯೆ' ಎನ್ನುತ್ತಾರೆ ಕುವೆಂಪು. ಕೀರ್ತಿ, ಶಿಕ್ಷಣ, ಹಣ, ಸ್ಥಾನಮಾನ, ಎಲ್ಲವನ್ನೂ ನಾವು ಜೀವನದಲ್ಲಿ ಸಂಪಾದಿಸಿರಬಹುದು. ಆದರೆ ಈ ಸಂಪಾದನೆಗಳಿಗೆಲ್ಲಾ ನಿಜವಾದ ಬೆಲೆ ಬರುವುದು ಅವುಗಳ ಹಿಂದೆ ಭಗವಂತನೆಂಬ ಆ 'ಒಂದು' ಇದ್ದರೆ ಮಾತ್ರ. ಆ 'ಒಂದು' ಇಲ್ಲದಿದ್ದರೆ ಈ ಗಳಿಕೆಗಳೆಲ್ಲಾ ಬೆಲೆರಹಿತವಾದ ಸೊನ್ನೆಗಳಾಗಿ ಬಿಡುತ್ತವೆ ಎನ್ನುವ ಶ್ರೀರಾಮಕೃಷ್ಣರ ಅರ್ಥಗರ್ಭಿತ ಮಾತು ಗಡಿಬಿಡಿಯಲ್ಲಿ ಮುಳುಗಿರುವ ಗೃಹಸ್ಥರ ಕಣ್ಣನ್ನು ತೆರೆಸುತ್ತದೆ. ತಕ್ಷಣದ ಲಾಭಸುಖಗಳಿಗೆ, ಚಿತ್ರವಿಚಿತ್ರವಾದ ಆಕರ್ಷಣೆ, ಪ್ರಲೋಭನೆಗಳಿಗೆ ಬಲಿಪಶುಗಳಾಗದೆ, ದೃಢವಾಗಿ ಮುನ್ನಡೆಯಲು ಮಾರ್ಗದರ್ಶನ ಮಾಡುತ್ತದೆ ಅಧ್ಯಾತ್ಮ. ಜ್ಞಾನವು ಬೇರೂರಿ ನೆಲೆ ನಿಲ್ಲುವಂತೆ ಮಾಡುತ್ತದೆ ಅವಿರತವಾದ ಸಾಧನೆ.

ಮಾನವರಾದ ನಮ್ಮಲ್ಲಿ ತಿಳುವಳಿಕೆಯ ಜ್ಞಾನಶಕ್ತಿ, ಕುಶಲತೆಯಿಂದ ಕರ್ಮಮಾಡುವ ಇಚ್ಛಾಶಕ್ತಿ, ಹೃದಯದ ಭಾವನೆಯಿಂದ ಇತರರನ್ನು ಕಾಣುವ ಪ್ರೇಮಶಕ್ತಿ ಎಲ್ಲವೂ ಸ್ವಲ್ಪ ಪ್ರಮಾಣದಲ್ಲಿ ಮಾತ್ರ ಇರುತ್ತವೆ. ಇವುಗಳಲ್ಲಿ ಪ್ರೇಮಶಕ್ತಿ ಎಂಬುದನ್ನು ಎಲ್ಲರೂ ಸಮುದಾಯದಲ್ಲಿ ಬೆಳೆಸಿಕೊಳ್ಳಬೇಕು. ಗೃಹಸ್ಥಜೀವನದಲ್ಲಿ, ಭಿನ್ನ ಭಿನ್ನಸ್ವಭಾವದ ಜನರು ಒಟ್ಟುಗೂಡಿ ಬಾಳುವಾಗ ಸಹನೆ ಮತ್ತು ಪ್ರೇಮಶಕ್ತಿಯು ಅಗಾಧವಾಗಿ ಬೇಕಾಗುತ್ತದೆ. ಇಲ್ಲದಿದ್ದರೆ ಸಾಮರಸ್ಯದ ಸಂತಸಮಯ ಬಾಳುವೆ ಎಂಬುದು ಕನ್ನಡಿಯೊಳಗಿನ ಗಂಟಾಗುತ್ತದೆ. ಈ ಪ್ರೇಮ ಸಾಮರಸ್ಯಗಳಿರುವ ಗೃಹಸ್ಥ ಜೀವನದ ಆದರ್ಶವನ್ನು ಶ್ರೀಮಾತೆ ಶಾರದಾದೇವಿಯವರು ತಾವೇ ನಿದರ್ಶನವಾಗಿ ನಮ್ಮ ಮುಂದಿಟ್ಟಿದ್ದಾರೆ. ಸ್ವಾರ್ಥಸಾಧಿಸುವ ಸೋದರರೇ ತುಂಬಿದ್ದ ಕುಟುಂಬದಲ್ಲಿ ಎಂತಹ ನಿಃಸ್ವಾರ್ಥದ, ಶುದ್ಧಪ್ರೇಮದ, ಸಹನಾಪೂರ್ಣ ಜೀವನ ನಡೆಸಿದರು ಶ್ರೀಮಾತೆಯವರು ಎಂಬುದು ಒಂದು ಪ್ರಯೋಗ ಸಾಧ್ಯವಾದ ಪಾಠವಾಗಬೇಕು ಗೃಹಸ್ಥರಿಗೆ.

''ನಿನಗೆ ಮನಸ್ಸಿನ ಶಾಂತಿಯು ಬೇಕಾದರೆ ಯಾರಲ್ಲಿಯೂ ದೋಷವನ್ನು ನೋಡಬೇಡ'' ಎಂಬ ಶ್ರೀಮಾತೆಯವರ ಅಂತಿಮ ಸಂದೇಶವು ಸಾಮರಸ್ಯದ ಸೂತ್ರವೇ ಆಗಿದೆ.

ಆಗಾಗ್ಗೆ ನಿರ್ಜನ ಪ್ರದೇಶದಲ್ಲಿ ಕುಳಿತು ಧ್ಯಾನ, ಜಪದಲ್ಲಿ ತೊಡಗಿದರೆ ಮನಸ್ಸು ದಿನನಿತ್ಯದ ಜಂಜಾಟದಿಂದ ಬಿಡಿಸಿಕೊಂಡು ಸಶಕ್ತವಾಗುತ್ತದೆ. ಮನೆಯಲ್ಲಿ ನಿತ್ಯವೂ ಪೂಜೆ, ಆರಾಧನೆ, ಉಪಾಸನೆಗಳನ್ನು ನಿಗದಿತ ಸಮಯದಲ್ಲಿ ನಿಷ್ಠೆಯಿಂದ ಮಾಡಿದರೆ ಇಷ್ಟದೈವ ಅಥವಾ ಉಪಾಸ್ಯ ದೇವತೆಯ ಗುಣ, ಲಕ್ಷಣ, ಶಕ್ತಿಗಳು ನಮ್ಮ ಪ್ರಕೃತಿಯನ್ನು ಪ್ರವೇಶಿಸುತ್ತವೆ. ಮನೆಯ ವಾತಾವರಣದಲ್ಲಿರುವ ತನ್ಮಾತ್ರೆಗಳ ಶುದ್ಧಿಯಾಗಿ, ನಮ್ಮ ಅಹಂ-ಕೇಂದ್ರಿತ ಆಲೋಚನೆಗಳ ಕಲ್ಮಷಗಳು ಕ್ಷೀಣವಾಗುತ್ತವೆ. 'ಸಂಸಾರಕ್ಕಾಗಿ ಭಗವಂತನಿಲ್ಲ; ಭಗವಂತನಿಗಾಗಿ ಸಂಸಾರವಿದೆ' ಎಂಬ ದೃಷ್ಟಿಯಿಂದ ಗಮನಿಸಿದರೆ ಭಗವಂತನೊಡನೆ ನಿತ್ಯ ಸಂಪರ್ಕದಲ್ಲಿರಬೇಕು; ಅವನಿಗೆ ನಮ್ಮ ಜೀವನದ ಸಕಲ ಆಗುಹೋಗುಗಳನ್ನು ಸಮರ್ಪಿಸಬೇಕು ಎಂಬ ಶರಣಾಗತ ಭಾವ ಸ್ಥಾಯಿಯಾಗುತ್ತದೆ. ಎಲ್ಲವನ್ನೂ ಮೀರಿದ, ಆದರೆ ಎಲ್ಲಕ್ಕೂ ಕಾರಣವಾದ ಭಗವಂತನ ಸಂಕಲ್ಪವನ್ನು ಗುರುತಿಸುವುದು ಗೃಹಸ್ಥ ಜೀವನದಲ್ಲಿ ಅತಿ ಮುಖ್ಯವಾದುದು. ಇದರಿಂದ ನಮ್ಮ ನಮ್ಮ ಆಗ್ರಹ ಇಚ್ಛೆ ಮತ್ತು ಉಪೇಕ್ಷೆಗಳ ಅತಿಯು ಕಡಿಮೆಯಾಗುವುದು. ನಿತ್ಯ ಸ್ತೋತ್ರಪಾರಾಯಣವು ಆ ದೇವತೆಯೊಡನೆ ನಮ್ಮ ಸಂಬಂಧವನ್ನು ಗಟ್ಟಿಮಾಡುತ್ತದೆ. ಆಧ್ಯಾತ್ಮಿಕ ಗ್ರಂಥಗಳು ಮತ್ತು ಮಹಾಪುರುಷರ ಜೀವನಸಂದೇಶಗಳ ಅಧ್ಯಯನವನ್ನು ಮಾಡುವುದರಿಂದ ನಮ್ಮ ಜೀವನದೃಷ್ಟಿಯು ವಿಶಾಲವಾಗಿ, ಮಾನವ ಸಂಬಂಧಗಳಲ್ಲಿ ಉದಾರತೆ ಮತ್ತು ಶುದ್ಧಭಾವಗಳು ಮೂಡುತ್ತವೆ. ಭಾವನೆಗಳ ಮೇಲೆ ಅದ್ಭುತ ನಿಯಂತ್ರಣ ಸಾಧಿಸುವುದು ಆಗ ಸುಲಭವಾಗುತ್ತದೆ. ಗೀತೆಯು ಹೇಳುವ ಸಮತ್ವದ ಅಭ್ಯಾಸವು ಪರಿಸ್ಥಿತಿಗಳ ವೈಷಮ್ಯದ ನಡುವೆ ಗೃಹಸ್ಥರಿಗೆ ಅತ್ಯಗತ್ಯ. ಮನೆಯ ಪ್ರತಿಯೊಬ್ಬರೂ ಅಂತರಂಗದಲ್ಲಿ ಆತ್ಮಜ್ಞಾನ ಪಡೆದು, ಎಲ್ಲರೊಳಗೂ ಒಬ್ಬನೇ ಭಗವಂತನಿದ್ದಾನೆ ಮತ್ತು ಎಲ್ಲರ ದೇಹ-ಮನಗಳಿಗೆ ಆಧಾರವಾಗಿ ನಿರ್ಲಿಪ್ತವಾದ ಏಕಾತ್ಮವಿದೆ ಎಂಬ ಅನುಭವ ಪಡೆದರೆ ಮನೆಯೇ ದೇವಮಂದಿರವಾಗುತ್ತದೆ. ಆದ್ದರಿಂದ ರೋಗಿಯಾದವನಿಗೆ ಔಷಧ ಅಗತ್ಯವೇ ಎಂಬ ಮಾತು ಹೇಗೆ ಅರ್ಥಹೀನವೋ ಹಾಗೆಯೇ ಗೃಹಸ್ಥರಾದವರಿಗೆ ಆಧ್ಯಾತ್ಮಿಕ ಸಾಧನೆಯು ಆವಶ್ಯಕವೇ ಎಂಬ ಪ್ರಶ್ನೆಯೂ ಅಸಂಬದ್ಧವಾದುದು.


*With Best Compliments*

PURE SILVER ARTICLE DEALERS

**VISHWAS**

J.N. MARDI MARKET
Chowdeswari Temple Street
BANGALORE – 560 002.



WHOLE SALE SILVER ARTICLE MANUFACTURERS



**SREE SUBRAMANYESHWARA JEWELLERS**

J. N. Maradi Market, # 1, Chowdeshwari Temple Street, BANGALORE – 560 002

WHOLE SALE BULLION MERCHANT

**J.J. JEWELLERS**

C. DEVI MARADI MARKET, C.T. STREET
BANGALORE – 560 002